ಆರ್. ಮಧುಸೂದನ್, ಹಾಸನ
*ಕಲಂ(ಲೇಖನಿ)ಗೂ, ಕಲಾಂಗೂ ಏನು ವ್ಯತ್ಯಾಸ?*



ಲೇಖನಿಯಿಂದ ಬಂದದ್ದೆಲ್ಲಾ ಲೇಖನಾರ್ಹವಲ್ಲ. ಆದರೆ ಕಲಾಂರಿಂದ ಬಂದದ್ದೆಲ್ಲಾ ಉಲ್ಲೇಖನಾರ್ಹ.

ಎಚ್.ಜಿ. ಜಗದೀಶ್, ಮೈಸೂರು
ಇದು ನಾನು 31.2.1896ರಲ್ಲಿ ಹಿಂದಿನ ಜನ್ಮದಲ್ಲಿ ಬರೆದ ಪತ್ರ. ನಿಮಗೆ ಜನ್ಮಾಂತರಗಳಲ್ಲಿ ನಂಬಿಕೆ ಇದೆಯೆ?
ಜನ್ಮಾಂತರದಲ್ಲಿ ನಂಬಿಕೆ ಇಲ್ಲದಿದ್ದರೂ ಪೋಸ್ಟ್ ಆಫೀಸ್ ವಿಳಂಬದಲ್ಲಿ ನಂಬಿಕೆ ಇದೆ.

ಎಂ.ಬಿ. ಕೃಷ್ಣಮೂರ್ತಿ, ಚಾಮರಾಜನಗರ
*ನಿಮಗೆ ಜಗದೊಳಿರುವ ಮನುಜರನ್ನು ಕಂಡರೆ ಯಾವ ವಿಚಾರಕ್ಕೆ ನಗೆ ಬರುತ್ತದೆ?*
‘ಇನ್ನೊಂದ್ಸರ್ತಿ ಆತ್ಮಹತ್ಯೆ ಮಾಡ್ಕೋತೀನಿ ಅಂದ್ರೆ ಸಾಯಿಸ್ಬಿಡ್ತೀನಿ ನೋಡು’ ಎನ್ನುವುದನು ಕಂಡು.

ಸೋಮಶೇಖರ್, ಎಲೆಮುದ್ದನಹಳ್ಳಿ
*ಈ ಜಗತ್ತಿನಲ್ಲಿ ತಪ್ಪುಗಳನ್ನು ಮಾಡದವರು ಯಾರಾದರೂ ಇದ್ದಾರೆಯೇ?*
ಸ್ಪೆಲ್ ಚೆಕ್ ಕಂಡುಹಿಡಿದವರು!

ಅಮರಯ್ಯಾ ಪತ್ರಿಮಠ, ಸುರಪೂರ
*ಆಕಾಶಕ್ಕೆ ಏಣಿ ಹಾಕೋದೂಂದ್ರೆ...?*




ಹೆಲಿಕಾಪ್ಟರ್‌ನಿಂದ ಹೊರಕ್ಕೆ ಇಳಿಬೀಳುವ ಏಣಿ.

ಎಸ್. ಲಕ್ಷ್ಮೀನರಸಿಂಹ, ಚಾಮರಾಜನಗರ
*ನಮ್ಮಂತಹ ಯಕ್ಷರ ಪ್ರಶ್ನೆಗಳಿಗೆ ಉತ್ತರಿಸುವ ನೀವು ಧರ್ಮರಾಯನ ಗೋತ್ರ, ವಂಶದವರೇ?*
ಅಲ್ಲ. ಇದು ಕೋಪಿಷ್ಟ ಮೇಷ್ಟ್ರಿಗೆ ಉತ್ತರಿಸದಿದ್ದಾಗ ‘ಲೈಫ್‌ಲಾಂಗ್ ಕೊಶ್ಚನ್ ಆನ್ಸರ್ ಬರೆಯುವಂತಾಗಲಿ’ ಅಂತ ಶಪಿಸಿದ ಫಲ!

ರಮೇಶ. ಜ. ಬೊಂಗಾಳೆ, ಬೈಲಹೊಂಗಲ
*ಸಿರಿತನ ಅನುಭವಿಸಿ ಬಡತನ ಬಂದರೆ ಏನಾಗುತ್ತದೆ ಸಾರ್?*
ನಿಮ್ಮ ಸ್ನೇಹಿತರ ಸಂಖ್ಯೆ ಸಿಂಗಲ್ ನಂಬರ್‌ಗೆ ಇಳಿಯುತ್ತದೆ; ನೀವು ಲಾಟರಿ.

ಆರಿಫ್, ದಾವಣಗೆರೆ
*ಮನುಷ್ಯನಿಗೆ ನೆನಪಿನ ಶಕ್ತಿಗಿಂತ ಮರೆವಿನ ಶಕ್ತಿಯೇ ಹೆಚ್ಚಾಗಿರುತ್ತದಲ್ಲಾ, ಏಕೆ?*
ತಲೆಯಲ್ಲಿ ರೀಸೈಕಲ್ ಬಿನ್‌ಗಿಂತ ಟ್ರಾಷ್ ಫೈಲೇ ದೊಡ್ಡದಾಗಿರುವುದರಿಂದ.

ಅನಂತಪದ್ಮನಾಭ ಹೆಚ್.ಎಂ., ಮೈಸೂರು
*ಸುಪ್ತಸ್ಯ, ಮೃತಸ್ಯ ಕೋ ವಿಶೇಷತಃ?*
ಸುಪ್ತಸ್ಯ ಶ್ವಃ ಅಸ್ತಿ; ಮೃತಸ್ಯ ಶ್ವಃ ಅಸ್ಥಿ!

ಜೆ.ಆರ್.ಆದಿನಾರಾಯಣಮುನಿ, ಬೆಂಗಳೂರು
*ಜಿರಳೆ ಕಂಡರೆ ಹೆದರುವ ಹೆಂಗಸರು ಬಲಿಷ್ಠ ಗಂಡಸರನ್ನೇ ಹೆದರಿಸುತ್ತಾರಲ್ಲಾ...?*
ಜಿರಳೆಯ ಮೇಲೆ ಡೌರಿ, ಮಾನನಷ್ಟ, ಮಾನಭಂಗ ಕೇಸ್‌ಗಳನ್ನು ಹಾಕಿ ಹೆದರಿಸಲು ಸಾಧ್ಯವಿಲ್ಲವಲ್ಲ!

ಎಚ್. ಆನಂದ್ ಕುಮಾರ್, ಚಿತ್ರದುರ್ಗ
*ಮಟ್ಕ, ಇಸ್ಪೀಟ್, ಗುಟ್ಕ, ಮದ್ಯಗಳನ್ನು ಜನ ಅಪ್ಪುತ್ತಿರುವುದು ಏತಕ್ಕೆ ರಾಮ್ ಶಿವಾ?*
ಸರ್ಕಾರ ಎಲ್ಲ ಭಾಗ್ಯಗಳನ್ನೂ ಕೊಟ್ಟು ಆಲಸಿಯಾಗಿಸಿರುವುದರಿಂದ ಇವು ಅವರಿಗೆ ಟೈಂ ಪಾಸ್ ಭಾಗ್ಯವಂತೆ!

ಕುಮಾರ ಚಲವಾದಿ, ಹೊಳೆನರಸಿಪುರ
*ಸಾವಿಗೂ, ನಿದ್ರೆಗೂ ಏನು ವ್ಯತ್ಯಾಸ?*
ನಿದ್ರೆಗೆ ಏಸೊಂದು ಅಲಾರಂ! ಸಾವಿಗೆ ಏಸು, ಅಲ್ಲಾ, ರಾಮ್...!

ಎಂ.ಎಸ್. ಧರ್ಮೇಂದ್ರ, ದೊಡ್ಡಮಗ್ಗೆ
*ಕನ್ನಡದ ಸೊಗಡಿನ ಕಥೆಯುಳ್ಳ ಚಲನಚಿತ್ರಗಳಿಗೂ ಸಹ ವಿದೇಶದಲ್ಲಿ ಹಾಡುಗಳನ್ನು ಚಿತ್ರಿಸುವ ಉದ್ದೇಶವೇನು?*
ಹಾಡುಗಳಲ್ಲಾದರೂ ನಮ್ಮ ದೇಶದ ಹೈಲೈಟ್‌ಗಳಾದ ತಿಪ್ಪೆ, ತೊಪ್ಪೆ, ಗುಪ್ಪೆ ಕಾಣದಿರಲೆಂದು.

ನವಿರವಿ, ಬಾಳೆಹೊನ್ನೂರು
*ತಲೆಕೂದಲು ಒಟ್ಟಿಗೆ ಬೆಳ್ಳಗಾಗದೆ ಸ್ವಲ್ಪಸ್ವಲ್ಪವೇ ಬೆಳ್ಳಗಾಗುವುದು ಏಕೆ?*
ರಕ್ತಗತವಾಗಿ ಬಂದುಬಿಟ್ಟಿರುವ ಇನ್‌ಸ್ಟಾಲ್‌ಮೆಂಟ್ ಬುದ್ಧಿ.

## ಬಹುಮಾನಿತ ಪ್ರಶ್ನೆ

ಎನ್. ಗೋಪಾಲರಾವ್, ಹೊಸಕೆರೆಹಳ್ಳಿ
*ಹಸುಗೆ-ಎಮ್ಮೆಗೆ ಮಾತ್ರ ಕರುಗಳಿವೆ; ಉಳಿದ ಎಲ್ಲಾ ಪ್ರಾಣಿಗಳಿಗೆ ಮರಿಗಳಿವೆಯಲ್ಲಾ, ಏಕೆ?*
ಹಾಗೇನಿಲ್ಲ. ಮನುಷ್ಯರಿಗೂ ಕರುಗಳಿವೆ. ಬಾಲ– ಕರು, ಯುವ– ಕರು, ಮುದು– ಕರು...

ಜಾಕೋಬ್ ಡಿಸೋಜ, ಕುರುವಳ್ಳಿ
*ಒಳ್ಳೆಯದು ಮಾಡಿದ್ದನ್ನು ಕೆಲವರು ಹೇಳಲ್ಲ. ಆದರೆ ಕೆಟ್ಟದ್ದು ಮಾಡಿದರೆ ಪದೇ ಪದೇ ಹೇಳ್ತಾರೆ. ಯಾಕೆ ಸಾರ್?*
ಆಚಾರದ ವಿಷಯಕ್ಕಿಂತ ಅತ್ಯಾಚಾರದ ವಿಷಯಕ್ಕೇ ಜಾಸ್ತಿ ಟಿಆರ್‌ಪಿ!

ಎನ್.ಎಸ್. ಆನಂದ್, ಕತ್ತರಿಗುಪ್ಪ
*ಪ್ರೀತಿಯೆಂಬುದು ರೇಷನ್ ಅಂಗಡಿಯಲ್ಲಿ ದೊರೆಯುವಂತಿದ್ದರೆ ಏನಾಗಬಹುದು ರಾಂಜೀ?*
ರೇಷನ್ ಅಂಗಡಿಯಲ್ಲಿ ಅಕ್ಕಿ, ಗೋಧಿಯ ಬದಲು ಗುಲಾಬಿ, ಗ್ರೀಟಿಂಗ್ ಕಾರ್ಡ್ ಮಾರಬೇಕಾಗಬಹುದು!

ಶ್ವೇತಾಲಕ್ಷ್ಮಿ ಅಮ್ಮೆ, ಬೆಂಗಳೂರು
*ತಿಂದಷ್ಟೂ ದೇಹ ಭಾರ. ಯೋಚಿಸಿದಷ್ಟು ಮನ ಭಾರ. ನಡೆದಷ್ಟೂ ದೇಹ ಸಪೂರ ಎನ್ನುತ್ತಾರೆ. ಹೌದೇ?*



ನಿಜ. ದಿನವೂ ನಾಯಿಯೊಡನೆ ವಾಕಿಂಗ್ ಹೋಗುತ್ತೇನೆ. ನಾಯಿ ಸಣ್ಣ ಆಗಿದೆ.

ವಿ. ಹೇಮಂತಕುಮಾರ್, ಬೆಂಗಳೂರು
ಮಧುಚಂದ್ರಕ್ಕೆ ಸೂಕ್ತ ಸ್ಥಳ ಯಾವುದು?
ಸ್ವಂತ ಹೆಂಡತಿಯ ಪಕ್ಕ.

ವೈ.ಜಿ. ನರಸಿಂಹನ್, ಶಿವಮೊಗ್ಗ
*ದೇವಸ್ಥಾನಗಳಲ್ಲಿ ಮಹಾಮಂಗಳಾರತಿಯ ಸಮಯದಲ್ಲಿ ಜೋರಾಗಿ ಗಂಟೆ, ಜಾಗಟೆ, ಮದ್ದಳೆ ಬಾರಿಸುವುದು ಏಕೆ?*
ತೂಕಡಿಕೆಯಿಂದ ಹೊರಬಂದು, ಪರ್ಸ್‌ನಿಂದ ಚಿಲ್ಲರೆ ತೆಗೆದು ರೆಡಿಯಾಗಿ ನಿಲ್ಲಲೆಂದು.

■ ರಾಮ್